

ಕಲಬುರ್ಗಿಯ ಶರಣಬಸವೇಶ್ವರ ಜಾತ್ರೆಯಲ್ಲಿ ಅಪ್ಪನ ಗುಡಿಯ ಮೇಲೆ ಬಣ್ಣದ ಮತಾಪು ಹಾರಿಸಿದಾಗ ಜನರೆಲ್ಲ ಮೈಮರೆತು ಜಯಘೋಷ ಕೂಗುತ್ತಾರೆ.

# ಕಾಲಚಕ್ರಕ್ಕೇ ರೆಸ್ಟು ಕೊಟ್ಟಬಿಡ್ತಿದ್ದೆ

ಕಲಬುರಗಿ, ಸುಣ್ಣದ ಕಲ್ಲಿಗೆ ನೀರು ಸೋಕಿ, ಬುರುಗು ಏಳುತ್ತಿದ್ದರಿಂದ ಕಲಬುರಗಿ ಅಂತಾರೆ. ಬುರುಗಿನಿಂದ ಹೂ ಅರಳುವುದರಿಂದ ಗುಲ್‌ಬರ್ಗಾ ಅಂತಲೂ ಕರೀತಿದ್ರು. ಕಲಬುರ್ಗಿ ಕಲ್ಯಾಣ ಕರ್ನಾಟಕದ ಹೆಬ್ಬಾಗಿಲು. ಇಲ್ಲಿಯ ಭಾಷೆ ಹೃದಯಕ್ಕೆ ಹತ್ತಿರ. ಸೌಹಾರ್ದವೆಂಬುದು ಇಲ್ಲಿಯ ಜೀವನರೀತಿ. ಗುರುಶಿಷ್ಯರ ಸಮಾಗಮದ ಶರಣಬಸವೇಶ್ವರ ದೇಗುಲ, ಭಕ್ತವತ್ಸಲನೆಂದೇ ಹೆಸರಾದ ಖ್ವಾಜಾ ಬಂದೇ ನವಾಜ್ ದರ್ಗಾ ಭೇಟಿ ನೀಡಿದವರಿಗೆ ಶಾಂತಿ ಕರುಣಿಸುವ ತಾಣಗಳು. ಕತೆಗಾರ್ತಿ **ಸಂಧ್ಯಾ ಹೊನಗುಂಟಿಕರ್** ಕಲಬುರ್ಗಿ ಕನ್ನಡದ ಕಂಪಿನಲ್ಲಿ ಗಂಡು ಹೆತ್ತವರ ಸಂಕಟವನ್ನು ಹಂಚಿಕೊಂಡಿದ್ದಾರೆ.

ಕೆಲವೊಮ್ಮೆ ಈ ಫೋನ್‌ಗಳ ಮ್ಯಾಲೇ ಸಿಟ್ಟು ಬರುತ್ತದ. ಹಿರಿ ಜೀವಕ್ಕ ಮಾತಾಡ್ಸಬೇಕಂತ ಫೋನ್ ಮಾಡಿದ್ದೇ ತಪ್ಪಾಯ್ತು. ಮೊಮ್ಮಗನ ಲಗ್ನದ ಸುದ್ದಿ ಹೇಳಕೋತ ನನ್ನ ತಲ್ಯಾಗ ಬಿಟ್ಟ ಹುಳ ಒಂದೇಸಮ ಕೊರಿಲಿಕ್ಕತ್ತಿತ್ತು.

'ನಿಂದೇ ಚಿಂತಿಯಾಗ್ಯದ. ಸುಮಾಗ ಒಬ್ಬ ಮಗನ ಲಗ್ನಕ್ಕೇ ಎಷ್ಟು ತ್ರಾಸಾಯ್ತು. ನಿಂಗಂತೂ ಎರಡೆರಡು ಗಂಡ್ಮಕ್ಕಳು. ಬಲು ಫಜೀತಿ. ಎಷ್ಟ್ ಹೈರಾಣಾಗ್ತೀಯೋ ಏನೋ. ನಿನ್ನ ಬಗ್ಗೆ ಪಾಪ ಅನ್ನಸ್ಲಿಕತ್ತದ' ಅಂತ ಕಂಡೋಲೆನ್ಸ್ ಸ್ಪೀಚ್ ನಂಗ ಹೇಳತಿದ್ದಳು. ಯಾಕಾರ ಮಾತಾಡಿದ್ನೋ ಅನಿಸಿ 'ಯಾರೋ ಬಂದ್ರು' ಅಂದು ಮುಗಿಸಿದ್ದೆ.

ಮಗನ ಲಗ್ನ ಮಾಡಬೇಕಂತ ವಧುವರರ ಮಾಹಿತಿ ಕೇಂದ್ರದಾಗ ರಿಜಿಸ್ಟರ್ ಮಾಡಿದೆ. ಎರಡೇ ದಿಂದಾಗ 28 ಹುಡುಗಿಯರದು ಲಿಸ್ಟ್ ಕಳಿಸಿದ್ರು. ಆಕಾಶಕ್ಕ ಮೂರೇ ಗೇಣು. ಸುಳ್ಳ ಪಳ್ಳ ಹೇಳಿ ಎದಿಯೊಡಿಸಿಬಿಟ್ಟ ಲೀಲಕ್ಕನ ಮ್ಯಾಲ ಸಿಟ್ಟು ಬಂತು. ಇಷ್ಟು ಕನ್ಯಾದಾಗ ಒಂದು ಕನ್ಯಾ ಸಿಗಲಿಕ್ಕಿಲ್ಲೇನು. ಆಕಿಗೂ ವಯಸ್ಸಾಯ್ತು. ಮಾತನಾಗ ಹುರುಳಿಲ್ಲನಿಸ್ತು.

ಒಂದೊಂದು ಫೋನ್ ನಂಬರೀಗಿ ಮಾತಾಡ್ಲಿಕ್ಕೆ ಸುರುಮಾಡಿದೆ. 'ನಿಮ್ಮ ಮಗಳನ್ನ ನನ್ನ ಮಗನ ಸಲುವಾಗಿ ಕೇಳ್ಬೇಕಂತ ಇಚ್ಛಾ.' ಅಂತ ಅಪ್ಯಾನ ವಯಸ್ಸು, ಹೈಟು, ವೇಟು, ಶಿಕ್ಷಣ, ಉದ್ಯೋಗ ಹೇಳಿದೆ. ಹುಡುಗಿ ಅಮ್ಮ 'ಎಲ್ಲಾ ಛಲೋದ ಬಿಡ್ರಿ. ಆದ್ರ ನಿಮ್ಮಗ ಹೈದರಾಬಾದನಾಗ ಇರ್ತಾನಲ್ಲ. ನಮ್ಮ ಹುಡುಗಿ ಬೆಂಗಳೂರss... ಬೇಕಂತಾಳ.' ಅಂದಳು.

ನಾನು 'ಹೈದರಾಬಾದ್‌ನೂ ದೊಡ್ಡ ಸಿಟಿ. ಸಂಸಾರಕ್ಕ ಸೋವಿ. ಬೆಂಗಳೂರಿನಷ್ಟು ತುಟ್ಟಿಲ್ರಿ. ಹಂಗೆ ನಿಮಗೂ ಸಮೀಪ ಆಗ್ತದ. ಹುಡುಗರಿಗೆ ತಿಳಿಯಂಗಿಲ್ಲ. ತಿಳಿಸಿ ಹೇಳಬೇಕಾಗ್ತದ' ಅಂದೆ.

'ನಮ್ಮದೂ ಅದೇ ವಿಚಾರದ. ಮಕ್ಕಳು ಹೆಂಗಂತಾರ ಹಂಗ' ಅಂತ ಫೋನಿಟ್ಟಳು.

ಬೆಂಗಳೂರಿಗರ ss... ಲಗ್ನ ಮಾಡಿಕೋರಿ ಬಾಂಬೆಕರss... ಮಾಡಿಕೋರಿ ಅಂತ ಬ್ಯಾರೆ ಕನ್ಯಾದ ನಂಬರು ನೋಡುದ್ರಾಗ ಹೈದ್ರಾಬಾದಿನ ಕನ್ಯಾನ ಸಿಗಬೇಕss...? ಎಂಥ